## ವಾರ್ಡ್ ಸಂಖ್ಯೆ 166 ಕರೀಸಂದ್ರ ವಾರ್ಡ್ ಕಛೇರಿಯಲ್ಲಿ ದಿನಾಂಕ: 03-04-2021 ರಂದು ಬೆಳಗ್ಗೆ 10:30 ಗಂಟೆಗೆ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು :

ಹಾಜರಿದ್ದ ಅಧಿಕಾರಿಗಳು:-

1. ಶ್ರೀ. ಪ್ರದೀಪ್ ರಾಥೋಡ್ – ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ಯತೀಶ್. ಎ.ಜೆ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 166 ಕರೀಸಂದ್ರ)
3. ಶ್ರೀಮತಿ. ಲೀಲಾವತಿ – ಕಂದಾಯ ವಸೂಲಿಗಾರರು (ವಾರ್ಡ್ 166 ಕರೀಸಂದ್ರ)
4. ಶ್ರೀ. ರುದ್ರೇಶ್ – ಸಹಾಯಕ ಅಭಿಯಂತರರು (ಬೆಸ್ಕಾಂ)
5. ಶ್ರೀ. ನರಸಿಂಹಲು – ಹಿ.ಆ.ಪ., (ವಾರ್ಡ್ 166 ಕರೀಸಂದ್ರ)
6. ಶ್ರೀ. ಕಾರ್ತಿಕ್ – ಕಿ.ಆ.ಪ (ಹೊರಗುತ್ತಿಗೆ ಆಧಾರದ ಮೇಲೆ) (ವಾರ್ಡ್ 166 ಕರೀಸಂದ್ರ)
7. ಟ್ರಾಫಿಕ್ ಪೋಲೀಸ್ ಇಲಾಖೆ ಜಯನಗರ/ ಬನಶಂಕರಿ ಹಾಗೂ ಕಾನೂನು ಮತ್ತು ಸುವ್ಯವಸ್ಥೆಯ ಪೊಲೀಸ್ ಅಧಿಕಾರಿಗಳು.
8. 7ನೇ ಬ್ಲಾಕ್ ಜಯನಗರ ಮತ್ತು ಕಾವೇರಿನಗರ ಸಂಘ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು.

-----

ದಿನಾಂಕ: 03-04-2021 ರಂದು ಸಮಿತಿ ಸದಸ್ಯರ ಸಮ್ಮುಖದಲ್ಲಿ ಮೇಲೆ ಹಾಜರಿದ್ದ ಜಲಮಂಡಳಿ, ಬೆಸ್ಕಾಂ, ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಇಲಾಖೆ, ಕಂದಾಯ, ಕಾಮಗಾರಿ ಇಲಾಖೆಗಳ ಅಧಿಕಾರಿಗಳು ಹಾಗೂ ಸದಸ್ಯರಿಗೆ ಸ್ವಾಗತ ಕೋರಿದರು.

ವಾರ್ಡ್ ಸಂಖ್ಯೆ 166 ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ರವರು ಸಭೆ ಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ಹಿಂದಿನ ಸಭೇಯಲ್ಲಿ ಜಲಮಂಡಳಿ, ಬೆಸ್ಕಾಂ, ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಇಲಾಖೆ, ಕಂದಾಯ, ಕಾಮಗಾರಿ ಇಲಾಖೆಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿರುವಂತೆ ವಿವರಿಸುತ್ತಾ, ಪ್ರಸ್ತುತ ಇರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲು ಪ್ರಸ್ತಾಪಿಸಿದರು.

1. ಹಿಂದಿನ ಸಭೆಯಲ್ಲಿ ವಾರ್ಡ್ ಸದಸ್ಯರು ಉಮಾಮಹೇಶ್ವರ ಉದ್ಯಾನವನ ಸುತ್ತಾಮುತ್ತಾ ಅನಧಿಕೃತವಾಗಿ ಗಾಡಿಗಳ ನಿಲುಗಡೆ ಮಾಡಲಾಗುತ್ತಿರುತ್ತದೆ ಹಾಗೂ ಕಸವನ್ನು ಸುರಿಯುತ್ತಿರುತ್ತಾರೆಂದು ದೂರು ನೀಡಿದರು. ಇದಕ್ಕೆ ನೋಡಲ್ ಅಧಿಕಾರಿಗಳು ವಾಹನ ನಿಲುಗಡೆ ಸಮಸ್ಯೆಯನ್ನು ಸಂಚಾರಿ ಪೋಲೀಸ್ ಅಧಿಕಾರಿಗಳಿಗೆ ಹಾಗೂ ಘನತ್ಯಾಜ್ಯ ವಿಲೇವಾರಿ ಸಮಸ್ಯೆಯನ್ನು ಸಂಬಂಧಪಟ್ಟ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಕ್ತ ಕ್ರಮ ಕೈಗೊಂಡು ವರದಿ ನೀಡಲು ಸೂಚಿಸಲಾಯಿತು. ಇದಕ್ಕೆ ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ತೋಟಗಾರಿಕೆ ಅಧೀಕ್ಷಕರು (ದಕ್ಷಿಣ) ರವರು ಕ್ರಮಕೈಗೊಂಡಿರುತ್ತಾರೆ.

2. ರಜತಾದ್ರಿ ಮುಂಭಾಗ, ಅವರೇಕಾಯಿ ವೃತ್ತ ಇಲ್ಲಿ ಫುಟ್‌ಪಾತ್‌ಗಳ ಮೇಲೆ ದೀಪಕ್ ಹಾಸ್ಪಿಟಲ್ ರಸ್ತೆಯ ಫುಟ್‌ಬಾತ್‌ನ್ನು ಸಣ್ಣ ಸಣ್ಣ ವ್ಯಾಪಾರಿಗಳು ಅಂದರೆ ಕ್ಯಾಂಟೀನ್, ಹಾಲಿನ ಭೂತ್, ಜ್ಯೂಸ್ ಸೆಂಟರ್, ತಳ್ಳುವ ಗಾಡಿಗಳನ್ನು ಇಟ್ಟು ವ್ಯಾಪಾರ ಮಾಡುತ್ತಿದ್ದು ಸಾರ್ವಜನಿಕರು ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿರುತ್ತದೆ ಎಂದು ದೂರು ಬಂದ ಹಿನ್ನಲೆಯಲ್ಲಿ ಸಂದರಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳಲಾಗಿರುತ್ತದೆ. ವಾರ್ಡ್ ಕಮಿಟಿಯಲ್ಲಿ ಸಾರ್ವಜನಿಕರು ದೂರಿರುತ್ತಾರೆ. ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಮತ್ತು ಟ್ರಾಫಿಕ್ ಪೊಲೀಸ್ ರವರಿಗೆ ಈ ರಸ್ತೆಗಳಲ್ಲಿ ವಾರಕ್ಕೊಮ್ಮೆ ಒಂದು ಬದಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ವಾರ್ಡ್ ಸಮಿತಿಯ ಅಧ್ಯಕ್ಷರು ಸೂಚನೆ ನೀಡಿದ್ದ ಮೇರೆಗೆ ಸೂಕ್ತ ಕ್ರಮ ಕೈಗೊಳ್ಳಲಾಗಿರುತ್ತದೆ.

**ಘನತ್ಯಾಜ್ಯ ವಿಲೇವಾರಿ :**

3. ಯಾರಬ್‌ನಗರ ಪಾಲಿಕೆಯ ಸಮುದಾಯ ಭವನದ ಬಳಿ ಇರುವ ಬ್ಲಾಕ್ ಪಾಯಿಂಟ್ ನಲ್ಲಿ ಹೆಚ್ಚಿಗೆ ಘನತ್ಯಾಜ್ಯ ಶೇಖರಣೆಯಾಗಲಿದ್ದು, ಈ ಸ್ಥಳದ ಪಕ್ಕದಲ್ಲಿ ಖಾಲಿ ಸ್ಥಳದ ತಡೆಗೋಡೆಯು ತೀವ್ರ ಹಾನಿಯಾಗಿ ಕುಸಿದು ದುಸ್ಥಿತಿಯಲ್ಲಿದ್ದು ಘನತ್ಯಾಜ್ಯ ತೆಗೆಯಲು ಸಿಬ್ಬಂದಿಗಳಿಗೆ ದುರಂತಕ್ಕೀಡಾಗುವ ಸಂಬಂವವಿರುವುದರಿಂದ ಈ ಕೂಡಲೇ ಯೋಜನೆ ದಕ್ಷಿಣ ವಿಭಾಗ ವತಿಯಿಂದ ಸದರಿ ತಡೆಗೋಡೆಯನ್ನು ದುರಸ್ಥಿಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಕಾಮಗಾರಿ ಇಲಾಖೆಗೆ ಸೂಚಿಸಲಾಯಿತು.

4. ಹಿಂದಿನ ಸಭೆಗಳಲ್ಲಿ ಸಾರ್ವಜನಿಕರು ಪ್ರಸ್ತಾಪಿಸಿದಂತೆ ಹುಣಸೇಮರ ಜಂಕ್ಷನ್‌ನಲ್ಲಿ ಘನತ್ಯಾಜ್ಯ ಸುರಿಯುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಘನತ್ಯಾಜ್ಯ ವಿಲೇವಾರಿ ವಿಭಾಗ ಹಾಗೂ ವಾರ್ಡ್ ವತಿಯಿಂದ ಬ್ಲಾಕ್ ಪಾಯಿಂಟ್ ತೆರವುಗೊಳಿಸಿ Beautification ಮಾಡಿ Door to Door Collection ಮಾಡಲು ನಾಗರೀಕರಲ್ಲಿ ಜಾಗೃತಿ ಮೂಡಿಸಿ ಕ್ರಮ ಕೈಗೊಳ್ಳಲಾಗಿರುತ್ತದೆ.

   ಸದರಿ ಸ್ಥಳದಲ್ಲಿ ಹಾಗೂ ಎಲ್ಲಾ ಬ್ಲಾಕ್ ಪಾಯಿಂಟ್‌ಗಳಲ್ಲಿನ ಸಿಸಿಟಿವಿ ಕ್ಯಾಮರಾಗಳನ್ನು ಈಗಾಗಲೇ ಅಳವಡಿಸಲಾಗಿದ್ದು ಕೂಡಲೇ ಸಂಬಂಧಪಟ್ಟ ವಿದ್ಯುತ್ ದಕ್ಷಿಣ ವಿಭಾಗ ವತಿಯಿಂದ ಸದರಿ ದುರಸ್ಥಿಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಲಾಯಿತು.

5. ವಾರ್ಡ್‌ನ ಇಂಡಸ್ಟ್ರಿಯಲ್ ಭಾಗದ ಕೆಲವು ಸ್ಥಳಗಳಲ್ಲಿ ಘನತ್ಯಾಜ್ಯ ಸಂಗ್ರಹಣೆ ಹಾಗೂ ಬೆಸ್ಕಾಂ ಟ್ರಾನ್ಸ್‌ಫಾರಂ ಸುತ್ತಾಮುತ್ತಾ ಸ್ವಚ್ಚತೆ ಕಾಪಾಡಲು ಬೆಸ್ಕಾಂ ಅಧಿಕಾರಿಗಳಿಗೆ ಹಾಗೂ ಘನತ್ಯಾಜ್ಯ ನಿರ್ವಹಣೆ ಅಧಿಕಾರಿಗಳಿಗೆ ಸೂಚಿಸಲಾಯಿತು.

6. ವಾರ್ಡ್ ವ್ಯಾಪ್ತಿಯ "ಎಫ್-ಪಾರ್ಕ್"ನಲ್ಲಿ ಮೂರು ಶೆಡ್ಡರ್ ಯಂತ್ರಗಳಿದ್ದು, ಇಲ್ಲಿಯವರೆವಿಗೂ ಯಾವುದೇ ರೀತಿಯಲ್ಲಿ ಬಳಸದೇ ಇರುವುದು ಕಂಡುಬಂದಿರುತ್ತದೆ. ಹಾಗೂ ಈ ಶೆಡ್ಡರ್ ಯಂತ್ರಗಳನ್ನು ವಾರ್ಡ ಪ್ರದೇಶದಲ್ಲಿ ಮನೆ ಮನೆ ಕಸ ಸಂಗ್ರಹಣೆ ವೇಳೆಯಲ್ಲಿ ಮನೆ ಗಳ ಮುಂದೆ ತೆಂಗಿನ ಮರಗಳ ಗರಿಗಳು ರಾಶಿಗಳಲ್ಲಿ ಇಟ್ಟಿರುವುದನ್ನು ವಿಲೇವಾರಿಗೊಲಿಸಲು ಕಷ್ಟಕರವಾಗಿರುವುದರಿಂದ "ಬುಲೇವಾರ್ಡ್ ಪಾರ್ಕ್" ಮತ್ತು "ಬನಶಂಕರಿ ಸ್ಮಶಾನ" ದಲ್ಲಿ ಸ್ಥಳಾಂತರಿಸುವ ಮುಖೇನ ಸದರಿ ಘಟಕಗಳಲ್ಲಿ ಉತ್ಪತ್ತಿಯಾಗುವ ಮರದ ಎಲೆ ತ್ಯಾಜ್ಯವನ್ನು ಸಂಸ್ಕರಿಸಲು ಅವಕಾಶ ಮಾಡಿಕೊಡಬೇಕಾಗಿ ಯೋಜನೆ-ದಕ್ಷಿಣ ವಿಭಾಗ ರವರಿಗೆ ಕ್ರಮಕೈಗೊಳ್ಳಲು ಸೂಚಿಸಲಾಯಿತು.

**ಬಿ.ಡಬ್ಲ್ಯೂ.ಎಸ್.ಎಸ್.ಬಿ :**

9ನೇ ಮುಖ್ಯರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಮ್ಯಾನ್ ಹೋಲ್ ಉಕ್ಕಿ ಹರಿಯುತ್ತಿರುವ ಬಗ್ಗೆ ಸಾರ್ವಜನಿಕರು ದೂರು ನೀಡಲಾಗಿ ಈ ಕುರಿತು ತುರ್ತಾಗಿ ನಿರ್ವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿದ್ದು ಅದರಂತೆ ಕ್ರಮವಹಿಸಲಾಗಿರುತ್ತದೆ.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಶ್ರೀ. ಪ್ರದೀಪ್ ರಾಥೋಡ್ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ 166